# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **63** |
| **ಸದಸ್ಯರ ಹೆಸರು** | : | **ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **04.12.2023** |
| **ಉತ್ತರಿಸುವ ಸಚಿವರು** | : | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಬಳ್ಳಾರಿ ಜಿಲ್ಲೆ, ಕುರಗೋಡು ಪಟ್ಟಣದಲ್ಲಿ ನೂತನ ಪಿ.ಯು ಕಾಲೇಜಿನ ಕಟ್ಟಡವನ್ನು ನಿರ್ಮಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ವರ್ಷ ನಿರ್ಮಿಸಲಾಯಿತು: ಎಷ್ಟು ಹಣವನ್ನು ಈ ಕಟ್ಟಡ ಕಾಮಗಾರಿಗೆ ನೀಡಲಾಗಿದೆ; ನಿರ್ಮಿಸಲಾದ ಕಟ್ಟಡದಲ್ಲಿ ಎಷ್ಟು ಕೊಠಡಿಗಳು ಇವೆ; (ವಿವರ ನೀಡುವುದು) | ಹೌದು.<br>2016-17ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ 2020-21ನೇ ಸಾಲಿನಲ್ಲಿ ಒಟ್ಟು ಅಂದಾಜು ಮೊತ್ತ ರೂ 196.22 ಲಕ್ಷದಲ್ಲಿ ಒಟ್ಟು 18 ಕೊಠಡಿಗಳನ್ನು ಹೊಂದಿರುವ ನೂತನ ಕಾಲೇಜನ್ನು ನಿರ್ಮಿಸಲಾಗಿದೆ. |
| **ಆ)** | ಈ ನೂತನ ಪಿ.ಯು ಕಾಲೇಜಿನ ಕಟ್ಟಡವನ್ನು ಯಾವಾಗ ಉದ್ಘಾಟನೆ ಮಾಡಲಾಗಿದೆ; ಮಾಡದಿದ್ದಲ್ಲಿ, ಈ ಕಟ್ಟಡವನ್ನು ಉದ್ಘಾಟನೆ ಮಾಡಲು ಇರುವ ತೊಂದರೆಗಳೇನು; ಉದ್ಘಾಟನೆ ಮಾಡದೆ ಅಲ್ಲಿನ ವಿದ್ಯಾರ್ಥಿಗಳಿಗೆ ವಿನಾಕರಣ ಅನಾನುಕೂಲವನ್ನು ಉಂಟು ಮಾಡಿ ಕಾಲವಿಳಂಬ ಮಾಡುತ್ತಿರಲು ಕಾರಣವೇನು; ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?(ವಿವರ ನೀಡುವುದು) | ಸದರಿ ನೂತನ ಪಿಯು ಕಾಲೇಜು ಕಟ್ಟಡವನ್ನು ದಿನಾಂಕ: 04-01-2023ರಂದು ಅಂದಿನ ಮುಖ್ಯಮಂತ್ರಿಯವರಿಂದ ಉದ್ಘಾಟನೆ ಮಾಡಲಾಗಿದೆ.<br>ನೀರಿನ ಹಾಗೂ ವಿದ್ಯುತ್ ಸಂಪರ್ಕದ ಕೊರತೆಯ ಕಾರಣದಿಂದ ಸ್ಥಳಾಂತರ ವಿಳಂಬವಾಗಿದ್ದು, ಪ್ರಸ್ತುತ ನೀರಿನ ವ್ಯವಸ್ಥೆ ಕಲ್ಪಿಸಲಾಗಿದ್ದು, ದಿನಾಂಕ:6-11-2023ರಂದು ಹಿಂದಿನ ಪಿಯು ಕಾಲೇಜಿನಿಂದ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. |

**ಇಪಿ 235 ಯೋಸಕ 2023**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**